# ಸಿನಿಮಾ ಕೆಲಸಗಾರರ ಮತ್ತು ಸಿನಿಮಾ ಥಿಯೇಟರ್ ಕೆಲಸಗಾರರ (ನಿಯೋಜನೆಯ ವಿನಿಯಮನ) ಅಧಿನಿಯಮ, 1981

[10-9-2001ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 19ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 2 ರಿಂದ 10 ರವರೆಗಿನ ಪುಟಗಳಲ್ಲಿ ಪ್ರಕಟಿತ]

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು

### ಅಧ್ಯಾಯ-I

### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ-II

### ಸಿನಿಮಾ ಕೆಲಸಗಾರರ ನಿಯೋಜನೆಯ ವಿನಿಯಮನ

3. ಒಪ್ಪಂದವಿಲ್ಲದೆ ಸಿನಿಮಾ ಕೆಲಸಗಾರರ ನಿಯೋಜನೆಯ ನಿಷೇಧ
4. ಸಂಧಾನಾಧಿಕಾರಿಗಳು
5. ಸಂಧಾನಾಧಿಕಾರಿಗಳ ಕರ್ತವ್ಯಗಳು
6. ಇತ್ಯರ್ಥವು ಬಂಧನಕಾರಿಯಾಗಿರತಕ್ಕುದು ಮತ್ತು ಸಕ್ಷಮ ಪ್ರಾಧಿಕಾರವು ಅದನ್ನು ಜಾರಿಗೆ ತರತಕ್ಕುದು
7. ನ್ಯಾಯಾಧಿಕರಣಗಳ ರಚನೆ
8. ನ್ಯಾಯಾಧಿಕರಣಗಳ ಅಧ್ಯಕ್ಷಾಧಿಕಾರಿಗಳಿಗಾಗಿನ ಅನರ್ಹತೆ
9. ಖಾಲಿ ಸ್ಥಾನಗಳ ಭರ್ತಿ
10. ನ್ಯಾಯಾಧಿಕರಣಗಳನ್ನು ರಚಿಸುವ ಆದೇಶಗಳ ಅಂತಿಮತೆ, ಇತ್ಯಾದಿ
11. ನ್ಯಾಯಾಧಿಕರಣಗಳಿಗೆ ವಿವಾದಗಳನ್ನು ಒಪ್ಪಿಸುವುದು
12. ಸಂಧಾನಾಧಿಕಾರಿಗಳು ಮತ್ತು ನ್ಯಾಯಾಧಿಕರಣಗಳ ಪ್ರಕ್ರಿಯೆ ಮತ್ತು ಅಧಿಕಾರಗಳು
13. ನ್ಯಾಯಾಧಿಕರಣಗಳ ಕರ್ತವ್ಯಗಳು
14. ನ್ಯಾಯಾಧಿಕರಣಗಳ ಐತೀರ್ಪುಗಳ ಪ್ರಕಟಣೆ
15. ಪುನರೀಕ್ಷಣೆ
16. ಸಿನಿಮಾ ಕೆಲಸಗಾರರಿಗೆ 1952ರ ಅಧಿನಿಯಮ 19ರ ಅನ್ವಯ
17. ದಂಡಗಳು
18. ಕಂಪನಿಗಳಿಂದ ಅಪರಾಧಗಳು
19. ಅಪರಾಧಗಳ ಸಂಜ್ಞೇಯತೆ
20. ಹೆಚ್ಚಿಸಲಾದ ದಂಡಗಳನ್ನು ವಿಧಿಸಲು ಮ್ಯಾಜಿಸ್ಟ್ರೇಟನ ಅಧಿಕಾರ
21. ಈ ಅಧ್ಯಾಯಕ್ಕೆ ಅಸಂಗತವಾಗಿರುವ ಕಾನೂನುಗಳು ಮತ್ತು ಒಪ್ಪಂದಗಳ ಪರಿಣಾಮ
22. ಈ ಅಧ್ಯಾಯದ ಮೇರೆಗೆ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ
22ಎ. ಅಧಿಕಾರಗಳ ಪ್ರತ್ಯಾಯೋಜನೆ
23. ನಿಯಮ ರಚನಾಧಿಕಾರ

## ಅಧ್ಯಾಯ-III

### ಸಿನಿಮಾ ಥಿಯೇಟರ್ ಕೆಲಸಗಾರರ ನಿಯೋಜನೆಯ ವಿನಿಯಮನ

24. 1952ರ ಅಧಿನಿಯಮ 19ರ ಅನ್ವಯ
25. 1972ರ ಅಧಿನಿಯಮ 39ರ ಅನ್ವಯ

# ಸಿನಿಮಾ ಕೆಲಸಗಾರರ ಮತ್ತು ಸಿನಿಮಾ ಥಿಯೇಟರ್ ಕೆಲಸಗಾರರ (ನಿಯೋಜನೆಯ ವಿನಿಯಮನ) ಅಧಿನಿಯಮ, 1981

**(1981ರ ಅಧಿನಿಯಮ ಸಂಖ್ಯೆ 50)**

**[24ನೇ ಡಿಸೆಂಬರ್ 1981]**

ಕೆಲವು ಸಿನಿಮಾ ಕೆಲಸಗಾರರು ಮತ್ತು ಸಿನಿಮಾ ಥಿಯೇಟರ್ ಕೆಲಸಗಾರರ ನಿಯೋಜನೆಯ ಷರತ್ತುಗಳನ್ನು ವಿನಿಯಮಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು.-

## ಅಧ್ಯಾಯ-I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸಿನಿಮಾ ಕೆಲಸಗಾರರ ಮತ್ತು ಸಿನಿಮಾ ಥಿಯೇಟರ್ ಕೆಲಸಗಾರರ (ನಿಯೋಜನೆಯ ವಿನಿಯಮನ) ಅಧಿನಿಯಮ, 1981 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು; ಮತ್ತು ಈ ಅಧಿನಿಯಮದ ವಿವಿಧ ಉಪಬಂಧಗಳಿಗಾಗಿ ಮತ್ತು ವಿವಿಧ ಪ್ರದೇಶಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಿನಿಮಾ ಥಿಯೇಟರು" ಎಂದರೆ ಸಿನಿಮಾ ಅಧಿನಿಯಮ, 1952 (1952ರ 37) ರ ಭಾಗ III ರ ಮೇರೆಗೆ ಅಥವಾ ಚಲನಚಿತ್ರವನ್ನು ಪ್ರದರ್ಶಿಸುವುದಕ್ಕಾಗಿ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಲೈಸೆನ್ಸನ್ನು ಕೊಟ್ಟಿರುವಂಥ ಸ್ಥಳ;

(ಬಿ) "ಸಿನಿಮಾ" ಎನ್ನುವುದು ಸಿನಿಮಾ ಅಧಿನಿಯಮ, 1952 (1952ರ 37)ರಲ್ಲಿ ಇರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಸಿ) "ಸಿನಿಮಾ ಕೆಲಸಗಾರ" ಎಂದರೆ,-

(i) ಕಲಾವಿದನೆಂದು (ನಟ, ಸಂಗೀತಗಾರ ಅಥವಾ ನರ್ತಕನನ್ನು ಒಳಗೊಂಡು) ಕೆಲಸ ಮಾಡಲು ಅಥವಾ ಕುಶಲ, ಅಕುಶಲ, ದೈಹಿಕ, ಮೇಲ್ವಿಚಾರಕ, ತಾಂತ್ರಿಕ, ಕಲಾತ್ಮಕ ಅಥವಾ ಬೇರೆ ರೀತಿಯ ಯಾವುದೇ ಕೆಲಸವನ್ನು ಮಾಡಲು ಫೀಚರ್ ಫಿಲ್ಮುಗಳ ತಯಾರಿಕೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ತಾನೇ ನೇರವಾಗಿ ಅಥವಾ ಯಾವನೇ ಕಂಟ್ರಾಕ್ಟರನ ಮೂಲಕ ಅಥವಾ ಇತರ ವ್ಯಕ್ತಿಯ ಮೂಲಕ ನಿಯೋಜಿತನಾಗಿರುವ; ಮತ್ತು

(ii) ಅಂಥ ಫೀಚರ್ ಫಿಲ್ಮಿನ ತಯಾರಿಕೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಅಂಥ ನಿಯೋಜನೆಗೆ ಸಂಬಂಧಿಸಿದಂತೆ ಯಾರ ಪರಿಶ್ರಮಧನವು, ಅಂಥ ಪರಿಶ್ರಮಧನವು ಮಾಸಿಕ ಮಜೂರಿಗಳ ರೂಪದಲ್ಲಿ ಪ್ರತಿ ತಿಂಗಳಿಗೆ ಒಂದು ಸಾವಿರದ ಆರು ನೂರು ರೂಪಾಯಿಗಳ ಮೊತ್ತವಾಗಿರುವುದೋ, ಮತ್ತು ಅಂಥ ಪರಿಶ್ರಮಧನವು ಒಂದೇ ಮೊತ್ತದ ರೂಪದಲ್ಲಿ ಹದಿನೈದು ಸಾವಿರ ರೂಪಾಯಿಗಳ ಮೊತ್ತವಾಗಿರುವುದೋ ಆ ಯಾವನೇ ವ್ಯಕ್ತಿ;

(ಡಿ) "ಸಕ್ಷಮ ಪ್ರಾಧಿಕಾರ" ಎಂದರೆ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ;

(ಇ) "ಕಂಟ್ರಾಕ್ಟರ್" ಎಂದರೆ ಫೀಚರ್ ಫಿಲ್ಮಿನ ತಯಾರಿಕೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ನಿಯೋಜಿಸಿಕೊಳ್ಳುವುದಕ್ಕಾಗಿ ಸಿನಿಮಾ ಕೆಲಸಗಾರರನ್ನು ಒದಗಿಸುವ ಅಥವಾ ಒದಗಿಸಲು ಜವಾಬ್ದಾರಿಯನ್ನು ಹೊತ್ತಿರುವ ವ್ಯಕ್ತಿ ಮತ್ತು ಅದು ಉಪಕಂಟ್ರಾಕ್ಟರ್ ಅಥವಾ ಏಜೆಂಟ್‌ನನ್ನು ಒಳಗೊಳ್ಳುತ್ತದೆ;

(ಎಫ್) "ಫೀಚರ್ ಫಿಲ್ಮ್ " ಎಂದರೆ ಒಂದು ರೂಪ ವಿಧಾನ ಮತ್ತು ಕಥಾವಸ್ತುವನ್ನು ಮುಖ್ಯವಾಗಿ ಸಂಭಾಷಣೆಗಳ ಮೂಲಕ ಮತ್ತು ಕಥನ ರೂಪ, ಉತ್ಸಾಹ, ಕಾರ್ಟೂನ್ ನಿರೂಪಣೆಯ ಮೂಲಕ ಅಪೂರ್ಣವಾಗಿ ತೋರಿಸಲಾಗಿರುವ ಅಥವಾ ಹಲವಾರು ನಟನ ಪಾತ್ರಗಳ ಸುತ್ತ ಕಲ್ಪಿಸಿದ ಕಥೆಯೊಂದಿಗೆ ಭಾರತದಲ್ಲಿ ಪೂರ್ಣವಾಗಿ ಅಥವಾ ಭಾಗಶಃ ತಯಾರಿಸಿದ, ಪೂರ್ಣ ಪ್ರಮಾಣದ ಸಿನಿಮಾ ಮತ್ತು ಅದು ಜಾಹೀರಾತು ಫಿಲ್ಮನ್ನು ಒಳಗೊಳ್ಳುವುದಿಲ್ಲ;

(ಜಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) ಫೀಚರ್ ಫಿಲ್ಮಿಗೆ ಸಂಬಂಧಪಟ್ಟಂತೆ "ನಿರ್ಮಾಪಕ" ಎಂದರೆ, ಅಂಥ ಫಿಲ್ಮನ್ನು ತಯಾರಿಸುವುದಕ್ಕಾಗಿ ಅವಶ್ಯ ವ್ಯವಸ್ಥೆಗಳ ಜವಾಬ್ದಾರಿಯನ್ನು (ಅಂಥ ಫಿಲ್ಮನ್ನು ತಯಾರಿಸುವುದಕ್ಕಾಗಿ ಹಣಕಾಸನ್ನು ಎತ್ತುವುದು ಮತ್ತು ಸಿನಿಮಾ ಕೆಲಸಗಾರರನ್ನು ತೊಡಗಿಸಿಕೊಳ್ಳುವುದನ್ನು ಒಳಗೊಂಡು) ಹೊತ್ತಿರುವ ವ್ಯಕ್ತಿ;

(ಐ) ಫೀಚರ್ ಫಿಲ್ಮಿಗೆ ಸಂಬಂಧಪಟ್ಟಂತೆ "ನಿರ್ಮಾಣ" ಎಂದರೆ ಅದನ್ನು ತಯಾರಿಸುವುದಕ್ಕೆ ಸಂಬಂಧಿಸಿದ ಯಾವುದೇ ಚಟುವಟಿಕೆಯನ್ನು ಒಳಗೊಳ್ಳುತ್ತದೆ;

(ಜೆ) "ನ್ಯಾಯಾಧಿಕರಣ" ಎಂದರೆ 7ನೇ ಪ್ರಕರಣದ ಮೇರೆಗೆ ರಚಿಸಿದ ಸಿನಿಮಾ ಕೆಲಸಗಾರರ ನ್ಯಾಯಾಧಿಕರಣ;

(ಕೆ) "ಮಜೂರಿಗಳು" ಎಂದರೆ ನಿಯೋಜನೆಯ ಕರಾರಿನ ನಿಬಂಧನೆಗಳಿಗನುಸಾರವಾಗಿ ಕೆಲಸಗಾರನಿಗೆ ನಗದಾಗಿ ಸಂದಾಯ ಮಾಡಬೇಕಾಗಿರುವಂಥ ಎಲ್ಲ ಉಪಲಬ್ಧಿಗಳು, ಆದರೆ ಅವು,-

(i) ಯಾವುದೇ ಆಹಾರ ರಿಯಾಯಿತಿಯ ನಗದು ಮೌಲ್ಯ;

(ii) ಅವನ ನಿಯೋಜನೆ ಅಥವಾ ಅಂಥ ನಿಯೋಜನೆಯಲ್ಲಿ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಕೆಲಸಗಾರನಿಗೆ ಸಂದಾಯ ಮಾಡಬೇಕಾದ ಯಾವುದೇ ತುಟ್ಟಿಭತ್ಯೆ (ಹಾಗೆಂದರೆ ಜೀವನ ವೆಚ್ಚದಲ್ಲಿನ ಏರಿಕೆಯ ಕಾರಣದಿಂದ ಅಥವಾ ಅವನು ಸಾಮಾನ್ಯವಾಗಿ ವಾಸಿಸುತ್ತಿರುವ ಸ್ಥಳವನ್ನು ಹೊರತುಪಡಿಸಿ ಇತರ ಸ್ಥಳದಲ್ಲಿ ಕೆಲಸ ಮಾಡಲು ಅವನನ್ನು ಅಗತ್ಯಪಡಿಸಿದ ಕಾರಣದಿಂದ ಕೆಲಸಗಾರನಿಗೆ ಸಂದಾಯ ಮಾಡಿದ್ದನ್ನು - ಅವುಗಳನ್ನು ಯಾವುದೇ ಹೆಸರಿನಲ್ಲಿ ಕರೆಯಲಿ, ಆ ಎಲ್ಲ ನಗದು ಸಂದಾಯಗಳು) ಮನೆ ಬಾಡಿಗೆ ಭತ್ಯೆ, ಓವರ್‌ಟೈಂ ಭತ್ಯೆ, ಬೋನಸು, ರುಸುಂ, ಅಥವಾ ಯಾವುದೇ ಅಂಥದೇ ಭತ್ಯೆ;

(iii) ಯಾವುದೇ ಪಿಂಚಣಿ ನಿಧಿ ಅಥವಾ ಭವಿಷ್ಯನಿಧಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಕೆಲಸಗಾರನ ಪ್ರಯೋಜನಕ್ಕಾಗಿ ನಿಯೋಜಕನು ಸಂದಾಯ ಮಾಡಿದ ಅಥವಾ ಸಂದಾಯ ಮಾಡಬೇಕಾದ ಯಾವುದೇ ವಂತಿಗೆ;

(iv) ಕರಾರು ಕೊನೆಗೊಂಡ ತರುವಾಯ ಅವನಿಗೆ ಸಂದಾಯ ಮಾಡಬೇಕಾದ ಯಾವುದೇ ಉಪದಾನ

-ಇವುಗಳನ್ನು ಒಳಗೊಳ್ಳುವುದಿಲ್ಲ.

## ಅಧ್ಯಾಯ-II

### ಸಿನಿಮಾ ಕೆಲಸಗಾರರ ನಿಯೋಜನೆಯ ವಿನಿಯಮನ

**3. ಒಪ್ಪಂದವಿಲ್ಲದೆ ಸಿನಿಮಾ ಕೆಲಸಗಾರರ ನಿಯೋಜನೆಯ ನಿಷೇಧ.-** (1) ಯಾವನೇ ವ್ಯಕ್ತಿಯನ್ನು ಯಾವುದೇ ಫೀಚರ್ ಫಿಲ್ಮಿನ ನಿರ್ಮಾಣದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಸಿನಿಮಾ ಕೆಲಸಗಾರನೆಂದು,-

(ಎ) ಅಂಥ ಫಿಲ್ಮಿನ ನಿರ್ಮಾಪಕನು, ಅಂಥ ವ್ಯಕ್ತಿಯೊಂದಿಗೆ ಅಥವಾ ಅಂಥ ವ್ಯಕ್ತಿಯನ್ನು ಕಂಟ್ರಾಕ್ಟರು ಅಥವಾ ಇತರ ವ್ಯಕ್ತಿಯ ಮೂಲಕ ನಿಯೋಜಿಸಿಕೊಂಡಿರುವಲ್ಲಿ ಅಂಥ ಫಿಲ್ಮಿನ ನಿರ್ಮಾಪಕ ಅಥವಾ ಅಂಥ ಕಂಟ್ರಾಕ್ಟರು ಅಥವಾ ಇತರ ವ್ಯಕ್ತಿಯು ಒಂದು ಒಪ್ಪಂದವನ್ನು ಬರಹದಲ್ಲಿ ಮಾಡಿಕೊಂಡಿದ್ದ ಹೊರತು; ಮತ್ತು

(ಬಿ) ಅಂಥ ಒಪ್ಪಂದವನ್ನು ಅಂಥ ಫಿಲ್ಮಿನ ನಿರ್ಮಾಪಕನು ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಂಡಿದ್ದ ಹೊರತು

- ನಿಯೋಜಿಸಿಕೊಳ್ಳತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಒಪ್ಪಂದವು,-

(ಎ) ನಿಯಮಿಸಿದ ನಮೂನೆಯಲ್ಲಿರತಕ್ಕುದು;

(ಬಿ) ಅದು ಯಾರ ನಿಯೋಜನೆಗೆ ಸಂಬಂಧಪಟ್ಟಿದೆಯೋ ಆ ವ್ಯಕ್ತಿಯ (ಇನ್ನು ಮುಂದೆ ಈ ಉಪಪ್ರಕರಣದಲ್ಲಿ ನಿಯೋಜಕನೆಂದು ಉಲ್ಲೇಖಿಸಲಾಗಿದೆ) ಹೆಸರು ಮತ್ತು ಅವನಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಇತರ ವಿವರಗಳನ್ನು ನಿರ್ದಿಷ್ಟಪಡಿಸತಕ್ಕುದು;

(ಸಿ) ಆ ನಿಯೋಜಿತನಿಗೆ ವಹಿಸಿರುವ ಕೆಲಸದ ಸ್ವರೂಪ, ಅವನ ಕೆಲಸದ ವೇಳೆಗಳು, ಅವನು ಹಕ್ಕುಳ್ಳವನಾಗಿರುವಂಥ ಮಜೂರಿಗಳು ಮತ್ತು ಇತರ ಪ್ರಯೋಜನಗಳು (ಭವಿಷ್ಯ ನಿಧಿ ಯಾವುದಾದರೂ ಇದ್ದರೆ ಅದರ ರೂಪದಲ್ಲಿ ಪ್ರಯೋಜನಗಳನ್ನೊಳಗೊಂಡು) ಅಂಥ ಮಜೂರಿಗಳ ಸಂದಾಯ ಮತ್ತು ಅಂಥ ಭವಿಷ್ಯ ನಿಧಿಗೆ ಕೊಡುವ ವಂತಿಗೆಗಳ ವಿಧಾನ ಮತ್ತು ನಿಯೋಜನೆಯ ಇತರ ಎಲ್ಲಾ ನಿಬಂಧನೆ ಮತ್ತು ಷರತ್ತುಗಳು

-ಇವುಗಳನ್ನು ನಿರ್ದಿಷ್ಟಪಡಿಸತಕ್ಕುದು;

(ಡಿ) ಅಂಥ ನಿಯೋಜಿತನನ್ನು ಕಂಟ್ರಾಕ್ಟರು ಅಥವಾ ಇತರ ವ್ಯಕ್ತಿಯ ಮೂಲಕ ನಿಯೋಜಿಸಲಾಗಿರುವಲ್ಲಿ ಮಜೂರಿಗಳ ಸಂದಾಯ ಅಥವಾ ಯಾವುದೇ ಇತರ ವಿಷಯಕ್ಕೆ ಸಂಬಂಧಿಸಿದಂತೆ ಆ ನಿಯೋಜಿತನ ಬಗ್ಗೆ ಆ ಒಪ್ಪಂದದ ಮೇರೆಗೆ ಇರುವ ಅವನ ಬಾಧ್ಯತೆಗಳನ್ನು ನಿರ್ವಹಿಸಲು ಕಂಟ್ರಾಕ್ಟರನು ಅಥವಾ ಇತರ ವ್ಯಕ್ತಿಯು ತಪ್ಪುವ ಸಂದರ್ಭದಲ್ಲಿ ಸಂಬಂಧಪಟ್ಟ ಆ ಫಿಲ್ಮಿನ ನಿರ್ಮಾಪಕನು ಅಂಥ ಬಾಧ್ಯತೆಗಳನ್ನು ನಿರ್ವಹಿಸಲು ಹೊಣೆಯುಳ್ಳವನಾಗತಕ್ಕುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಆ ಕಂಟ್ರಾಕ್ಟರನು ಅಥವಾ ಇತರ ವ್ಯಕ್ತಿಯು ತುಂಬಿಕೊಡುವುದಕ್ಕೆ ಹಕ್ಕುಳ್ಳವನಾಗಿರತಕ್ಕುದು ಎಂಬ ನಿರ್ದಿಷ್ಟ ಷರತ್ತನ್ನು ಒಳಗೊಂಡಿರತಕ್ಕುದು.

(3) ಸಿನಿಮಾ ಕೆಲಸಗಾರನಾಗಿ ಯಾವನೇ ವ್ಯಕ್ತಿಯ ನಿಯೋಜನೆಗೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಒಪ್ಪಂದದ ಒಂದು ಪ್ರತಿಯನ್ನು, ಅಂಥ ವ್ಯಕ್ತಿಯು 16ನೇ ಪ್ರಕರಣದ ಮೇರೆಗೆ ಭವಿಷ್ಯನಿಧಿಯ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿದ್ದರೆ, ಆ ಸಿನಿಮಾದ ನಿರ್ಮಾಪಕನು, ನಿಯೋಜಿತರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952ರ 19)ರ ಮೇರೆಗೆ ಸಂಬಂಧಪಟ್ಟ ಪ್ರಾದೇಶಿಕ ಭವಿಷ್ಯನಿಧಿ ಕಮಿಷನರನಿಗೆ ಸಹ ಕಳುಹಿಸತಕ್ಕುದು.

**4. ಸಂಧಾನಾಧಿಕಾರಿಗಳು.–** ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸಿನಿಮಾ ಕೆಲಸಗಾರನ ನಿಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳು ಅಥವಾ ಕೊನೆಗೊಳಿಸುವಿಕೆಗಳಿಗೆ ಸಂಬಂಧಿಸಿದಂತೆ, ಅಂಥ ಸಿನಿಮಾ ಕೆಲಸಗಾರ ಮತ್ತು ಯಾವ ಫಿಲ್ಮಿನಲ್ಲಿ ಅಥವಾ ಯಾವ ಫಿಲ್ಮಿಗೆ ಸಂಬಂಧಿಸಿದಂತೆ ಅವನನ್ನು ನಿಯೋಜಿಸಿಕೊಳ್ಳಲಾಗಿದೆಯೋ ಆ ಫಿಲ್ಮಿನ ನಿರ್ಮಾಪಕ ಅಥವಾ ಯಾವ ಕಂಟ್ರಾಕ್ಟರನ ಮೂಲಕ ಅವನನ್ನು ಹಾಗೆ ನಿಯೋಜಿಸಿಕೊಳ್ಳಲಾಗಿದೆಯೋ, ಆ ಕಂಟ್ರಾಕ್ಟರು ಅಥವಾ ಇತರ ವ್ಯಕ್ತಿ – ಇವರ ನಡುವಣ ಯಾವುದೇ ವಿವಾದದ (ಇಲ್ಲಿ ಇನ್ನು ಮುಂದೆ ಅದನ್ನು ವಿವಾದವೆಂದು ಉಲ್ಲೇಖಿಸಲಾಗಿದೆ) ಬಗ್ಗೆ ಮಧ್ಯಸ್ಥಿಕೆ ಮಾಡುವ ಮತ್ತು ಅದರ ಇತ್ಯರ್ಥವನ್ನು ಸಂವರ್ಧಿಸುವ ಕರ್ತವ್ಯವನ್ನು ಹೊರಿಸಲಾಗಿರುವ ಸಂಧಾನಾಧಿಕಾರಿಗಳಾಗಿರಲು ಅದು ಸೂಕ್ತವೆಂದು ಯೋಚಿಸುವಷ್ಟು ಸಂಖ್ಯೆಯ ವ್ಯಕ್ತಿಗಳನ್ನು ನೇಮಕ ಮಾಡಬಹುದು.

**5. ಸಂಧಾನಾಧಿಕಾರಿಗಳ ಕರ್ತವ್ಯಗಳು.–** (1) ಯಾವುದೇ ವಿವಾದವು ಇರುವಲ್ಲಿ ಅಥವಾ ಅದನ್ನು ಶಂಕಿಸಲಾದಲ್ಲಿ, ಸಂಧಾನಾಧಿಕಾರಿಯು ನಿಯಮಿಸಿದ ರೀತಿಯಲ್ಲಿ ಸಂಧಾನ ವ್ಯವಹರಣೆಗಳನ್ನು ನಡೆಸಬಹುದು.

(2) ಆ ಸಂಧಾನಾಧಿಕಾರಿಯು, ಆ ವಿವಾದವನ್ನು ಇತ್ಯರ್ಥಗೊಳಿಸುವ ಉದ್ದೇಶಕ್ಕಾಗಿ ಆ ವಿವಾದದ ಬಗ್ಗೆ ವಿಳಂಬವಿಲ್ಲದೆ ಅದರ ಗುಣಾವಗುಣಗಳು ಮತ್ತು ಸರಿಯಾದ ಇತ್ಯರ್ಥಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತನಿಖೆ ನಡೆಸತಕ್ಕುದು ಮತ್ತು ಆ ವಿವಾದದ ನ್ಯಾಯಯುತ ಮತ್ತು ಸೌಹಾರ್ದಯುತ ವ್ಯವಸ್ಥೆಗೆ ಬರುವಂತೆ ಪಕ್ಷಕಾರರನ್ನು ಪ್ರೇರೇಪಿಸುವ ಉದ್ದೇಶಕ್ಕಾಗಿ ಅವನು ಸೂಕ್ತವೆಂದು ಯೋಚಿಸುವಂಥ ಎಲ್ಲ ಕಾರ್ಯಗಳನ್ನು ಮಾಡಬಹುದು.

(3) ಆ ವಿವಾದದ ಅಥವಾ ವಿವಾದದಲ್ಲಿರುವ ಯಾವುದೇ ವಿಷಯದ ಬಗ್ಗೆ ಇತ್ಯರ್ಥವು ಆ ಸಂಧಾನ ವ್ಯವಹರಣೆಗಳ ಕ್ರಮದಲ್ಲಿ ಉಂಟಾದರೆ ಆ ಸಂಧಾನಾಧಿಕಾರಿಯು ಕೇಂದ್ರ ಸರ್ಕಾರಕ್ಕೆ ಆ ವಿವಾದದ ಪಕ್ಷಕಾರರು ರುಜು ಮಾಡಿರುವ ಇತ್ಯರ್ಥದ ವಿವರಣ ಪತ್ರದೊಂದಿಗೆ ಅದರ ವರದಿಯನ್ನು ಕಳುಹಿಸತಕ್ಕುದು.

(4) ಯಾವುದೇ ಅಂಥ ಇತ್ಯರ್ಥಕ್ಕೆ ಬಾರದೆ ಇರುವಾಗ, ಆ ಸಂಧಾನಾಧಿಕಾರಿಯು ಕಾರ್ಯ ಸಾಧ್ಯವಾದಷ್ಟು ಬೇಗ, ಆ ತನಿಖೆಯು ಮುಕ್ತಾಯಗೊಂಡ ತರುವಾಯ ಆ ವಿವಾದಕ್ಕೆ ಸಂಬಂಧಿಸಿದ ಸಂಗತಿಗಳು ಮತ್ತು ಸಂದರ್ಭಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಅದರ ಬಗ್ಗೆ ಇತ್ಯರ್ಥವನ್ನು ಉಂಟು ಮಾಡುವುದಕ್ಕಾಗಿ ಅವನು ಕೈಗೊಂಡಿರುವ ಕ್ರಮಗಳನ್ನು ನಮೂದಿಸಿ ಒಂದು ಪೂರ್ಣ ವರದಿಯನ್ನು ಅವನ ಅಭಿಪ್ರಾಯದಲ್ಲಿ ಯಾವ ಸಂಗತಿಗಳ ಕಾರಣದಿಂದ ಇತ್ಯರ್ಥಕ್ಕೆ ಬರಲಾಗಲಿಲ್ಲವೋ ಆ ಸಂಗತಿಗಳು ಮತ್ತು ಸಂದರ್ಭಗಳು ಮತ್ತು ಕಾರಣಗಳ ಬಗ್ಗೆ ಪೂರ್ಣ ವಿವರಣ ಪತ್ರದೊಂದಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು.

(5) (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವರದಿಯನ್ನು ಪರ್ಯಾಲೋಚಿಸಿದ ಮೇಲೆ ಕೇಂದ್ರ ಸರ್ಕಾರಕ್ಕೆ, ನ್ಯಾಯಾಧಿಕರಣಕ್ಕೆ ಒಪ್ಪಿಸುವ ಪ್ರಕರಣ ಇದಾಗಿದೆ ಎಂದು ಮನದಟ್ಟಾದರೆ, ಅದು 11ನೇ ಪ್ರಕರಣದ ಮೇರೆಗೆ ಹಾಗೆ ಒಪ್ಪಿಸಬಹುದು ಮತ್ತು ಆ ಸರ್ಕಾರವು ಅಂಥ ಉಲ್ಲೇಖವನ್ನು ಮಾಡದಿರುವಲ್ಲಿ ಅದು ಆ ಬಗ್ಗೆ ಅದರ ಕಾರಣಗಳನ್ನು ಅಭಿಲೇಖಿಸತಕ್ಕುದು ಮತ್ತು ಅದನ್ನು ಸಂಬಂಧಿಸಿದ ಪಕ್ಷಕಾರರಿಗೆ ತಿಳಿಸತಕ್ಕುದು.

(6) ಈ ಪ್ರಕರಣದ ಮೇರೆಗಿನ ವರದಿಯನ್ನು, ಸಂಧಾನ ವ್ಯವಹರಣೆಗಳು ಪ್ರಾರಂಭವಾದ ಮೂರು ತಿಂಗಳುಗಳೊಳಗೆ ಅಥವಾ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಇನ್ನೂ ಕಡಿಮೆ ಅವಧಿಯೊಳಗೆ ಒಪ್ಪಿಸತಕ್ಕುದು:

ಪರಂತು, ಸಂಧಾನಾಧಿಕಾರಿಯ ಅನುಮೋದನೆಗೆ ಒಳಪಟ್ಟು ಆ ವರದಿಯನ್ನು ಒಪ್ಪಿಸುವುದಕ್ಕಾಗಿನ ಕಾಲವನ್ನು ಆ ವಿವಾದದ ಎಲ್ಲಾ ಪಕ್ಷಕಾರರು ಬರಹದಲ್ಲಿ ಒಪ್ಪಿಕೊಂಡಿರಬಹುದಾದಂಥ ಅವಧಿಯವರೆಗೆ ವಿಸ್ತರಿಸಬಹುದು.

**6. ಇತ್ಯರ್ಥವು ಬಂಧನಕಾರಿಯಾಗಿರತಕ್ಕುದು ಮತ್ತು ಸಕ್ಷಮ ಪ್ರಾಧಿಕಾರವು ಅದನ್ನು ಜಾರಿಗೆ ತರತಕ್ಕುದು.–** ಈ ಅಧ್ಯಾಯದ ಮೇರೆಗೆ ಸಂಧಾನ ವ್ಯವಹರಣೆಯ ಕ್ರಮದಲ್ಲಿ ಆಗಿರುವ ಪ್ರತಿಯೊಂದು ಇತ್ಯರ್ಥಕ್ಕೆ ವಿವಾದದ ಎಲ್ಲಾ ಪಕ್ಷಕಾರರು ಬದ್ಧರಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ ಮತ್ತು ಸದರಿ ಇತ್ಯರ್ಥದ ನಿಬಂಧನೆಗಳನ್ನು ಜಾರಿಗೊಳಿಸುವುದು ಸಕ್ಷಮ ಪ್ರಾಧಿಕಾರದ ಕರ್ತವ್ಯವಾಗಿರತಕ್ಕುದು.

**7. ನ್ಯಾಯಾಧಿಕರಣಗಳ ರಚನೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ 3ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಸ್ವರೂಪದ ಯಾವುದೇ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ ವಿವಾದಗಳ ನ್ಯಾಯ ನಿರ್ಣಯಕ್ಕಾಗಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿರುವ ಸಿನಿಮಾ ಕೆಲಸಗಾರರ ನ್ಯಾಯಾಧಿಕರಣಗಳೆಂದು ಕರೆಯಲಾಗುವ ಒಂದು ಅಥವಾ ಅದಕ್ಕಿಂತ ಹೆಚ್ಚು ನ್ಯಾಯಾಧಿಕರಣಗಳನ್ನು ರಚಿಸಬಹುದು.

(2) ನ್ಯಾಯಾಧಿಕರಣವು ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ವ್ಯಕ್ತಿಯನ್ನು ಮಾತ್ರ ಒಳಗೊಂಡಿರತಕ್ಕುದು.

(3) ಒಬ್ಬ ವ್ಯಕ್ತಿಯು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ನೇಮಕಗೊಳ್ಳಲು–

(ಎ) ಅವನು, ಉಚ್ಚನ್ಯಾಯಾಲಯದ ನ್ಯಾಯಾಧೀಶನಾಗಿರುವ, ಅಥವಾ ಆಗಿದ್ದ ಅಥವಾ ಆಗಿರಲು ಅರ್ಹನಾಗಿರುವ ಹೊರತು; ಅಥವಾ

(ಬಿ) ಅವನು, ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಜಿಲ್ಲಾ ನ್ಯಾಯಾಧೀಶ ಅಥವಾ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶನಾಗಿದ್ದ ಹೊರತು; ಅಥವಾ

(ಸಿ) ಅವನು ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ ಮೇರೆಗೆ ರಚಿಸಲಾದ ಕೈಗಾರಿಕಾ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯ ಪದವನ್ನು ಧಾರಣ ಮಾಡಿದ್ದ ಹೊರತು

– ಅರ್ಹನಾಗಿರತಕ್ಕುದಲ್ಲ.

(4) ಕೇಂದ್ರ ಸರ್ಕಾರವು, ನ್ಯಾಯಾಧಿಕರಣದ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ ಅದಕ್ಕೆ ಸಲಹೆ ಕೊಡಲು ಅಸೆಸರುಗಳೆಂದು ಇಬ್ಬರು ವ್ಯಕ್ತಿಗಳನ್ನು ನೇಮಕ ಮಾಡುವುದು ಸೂಕ್ತವೆಂದು ಭಾವಿಸಿದರೆ ಹಾಗೆ ಮಾಡಬಹುದು.

**8. ನ್ಯಾಯಾಧಿಕರಣಗಳ ಅಧ್ಯಕ್ಷಾಧಿಕಾರಿಗಳಿಗಾಗಿನ ಅನರ್ಹತೆ.–** ಯಾವನೇ ವ್ಯಕ್ತಿಯನ್ನು,-

(ಎ) ಅವನು ಸ್ವತಂತ್ರ ವ್ಯಕ್ತಿಯಾಗಿಲ್ಲದಿದ್ದರೆ; ಅಥವಾ

(ಬಿ) ಅವನಿಗೆ ಅರವತ್ತೈದು ವರ್ಷಗಳ ವಯಸ್ಸು ತುಂಬಿದ್ದರೆ

–ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯ ಪದಕ್ಕೆ ನೇಮಕ ಮಾಡತಕ್ಕುದಲ್ಲ ಅಥವಾ ಅವನು ಅದರಲ್ಲಿ ಮುಂದುವರಿಯತಕ್ಕುದಲ್ಲ.

**9. *ಖಾಲಿ ಸ್ಥಾನಗಳ ಭರ್ತಿ.*–** ಯಾವುದೇ ಕಾರಣಕ್ಕಾಗಿ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯ ಪದದಲ್ಲಿ ಖಾಲಿಸ್ಥಾನವು (ತಾತ್ಕಾಲಿಕ ಗೈರು ಹಾಜರಿಯನ್ನು ಹೊರತುಪಡಿಸಿ) ಸಂಭವಿಸಿದರೆ, ಕೇಂದ್ರ ಸರ್ಕಾರವು ಆ ಖಾಲಿಸ್ಥಾನವನ್ನು ಭರ್ತಿ ಮಾಡಲು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಇನ್ನೊಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕುದು ಮತ್ತು ಆ ವ್ಯವಹರಣೆಯನ್ನು ಆ ಖಾಲಿ ಸ್ಥಾನವನ್ನು ಭರ್ತಿ ಮಾಡಿದಂಥ ಹಂತದಿಂದ ನ್ಯಾಯಾಧಿಕರಣದ ಮುಂದೆ ಮುಂದುವರಿಸಬಹುದು.

**10. ನ್ಯಾಯಾಧಿಕರಣಗಳನ್ನು ರಚಿಸುವ ಆದೇಶಗಳ ಅಂತಿಮತೆ, ಇತ್ಯಾದಿ.–** (1) ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ಯಾವನೇ ವ್ಯಕ್ತಿಯನ್ನು ನೇಮಕ ಮಾಡಿರುವ ಕೇಂದ್ರ ಸರ್ಕಾರದ ಯಾವುದೇ ಆದೇಶವನ್ನು ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕುದಲ್ಲ; ಮತ್ತು ಯಾವುದೇ ನ್ಯಾಯಾಧಿಕರಣದ ಮುಂದಿರುವ ಯಾವುದೇ ಕಾರ್ಯ ಅಥವಾ ವ್ಯವಹರಣೆಗಳನ್ನು ಅಂಥ ನ್ಯಾಯಾಧಿಕರಣದ ರಚನೆಯಲ್ಲಿನ ಯಾವುದೇ ದೋಷದ ಕಾರಣ ಮಾತ್ರದಿಂದಲೇ ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕುದಲ್ಲ.

(2) ಸಂಧಾನ ವ್ಯವಹರಣೆಯ ಕ್ರಮದಲ್ಲಿ ಆಗಿರುವ ಯಾವುದೇ ಇತ್ಯರ್ಥವು, ಅಂಥ ಇತ್ಯರ್ಥವು 5ನೇ ಪ್ರಕರಣದ (6)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅವಧಿಯು ಮುಕ್ತಾಯವಾದ ತರುವಾಯ ಆಗಿದ್ದಿತು ಎಂಬ ಸಂಗತಿಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ.

**11. ನ್ಯಾಯಾಧಿಕರಣಗಳಿಗೆ ವಿವಾದಗಳನ್ನು ಒಪ್ಪಿಸುವುದು.–** (1) 5ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವರದಿಯನ್ನು ಪರ್ಯಾಲೋಚಿಸಿದ ಮೇಲೆ, ಕೇಂದ್ರ ಸರ್ಕಾರವು, ಆ ವಿವಾದ ಅಥವಾ ಆ ವಿವಾದಕ್ಕೆ ಸಂಬಂಧಿಸಿರುವುದಾಗಿ ಅಥವಾ ಸಂಬಂಧಪಟ್ಟಿರುವುದಾಗಿ ಕಂಡುಬರುವ ಯಾವುದೇ ವಿಷಯವನ್ನು ನ್ಯಾಯ ನಿರ್ಣಯಕ್ಕಾಗಿ ನ್ಯಾಯಾಧಿಕರಣಕ್ಕೆ ಒಪ್ಪಿಸುವುದು ಅವಶ್ಯವೆಂದು ಅದಕ್ಕೆ ಮನದಟ್ಟಾದರೆ ಅದು ಬರಹದಲ್ಲಿನ ಆದೇಶದ ಮೂಲಕ ಹಾಗೆ ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಆದೇಶದಲ್ಲಿ ಅಥವಾ ತರುವಾಯದ ಆದೇಶದಲ್ಲಿ ಕೇಂದ್ರ ಸರ್ಕಾರವು ನ್ಯಾಯ ನಿರ್ಣಯಕ್ಕಾಗಿ ವಿವಾದದ ಅಂಶಗಳನ್ನು ನಿರ್ದಿಷ್ಟಪಡಿಸಿರುವಲ್ಲಿ, ಆ ನ್ಯಾಯಾಧಿಕರಣವು ಆ ಅಂಶಗಳು ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಅದರ ನ್ಯಾಯ ನಿರ್ಣಯವನ್ನು ಸೀಮಿತಗೊಳಿಸತಕ್ಕುದು.

**12. ಸಂಧಾನಾಧಿಕಾರಿಗಳು ಮತ್ತು ನ್ಯಾಯಾಧಿಕರಣಗಳ ಪ್ರಕ್ರಿಯೆ ಮತ್ತು ಅಧಿಕಾರಗಳು.–** (1) ಈ ಬಗ್ಗೆ ರಚಿಸಬಹುದಾದ ಯಾವುದೇ ನಿಯಮಗಳಿಗೊಳಪಟ್ಟು ಸಂಧಾನಾಧಿಕಾರಿ ಅಥವಾ ನ್ಯಾಯಾಧಿಕರಣವು, ಆ ಅಧಿಕಾರಿ ಅಥವಾ ನ್ಯಾಯಾಧಿಕರಣವು ಸೂಕ್ತವೆಂದು ಯೋಚಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕುದು.

(2) ಸಂಧಾನಾಧಿಕಾರಿ ಅಥವಾ ನ್ಯಾಯಾಧಿಕರಣವು ಈಗಿರುವ ಅಥವಾ ಶಂಕಿತ ಯಾವುದೇ ವಿವಾದದ ಬಗ್ಗೆ ವಿಚಾರಣೆಯನ್ನು ಮಾಡುವ ಉದ್ದೇಶಕ್ಕಾಗಿ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಆ ವಿವಾದದ ಯಾವನೇ ಪಕ್ಷಕಾರನ ಅಧಿಭೋಗದಲ್ಲಿರುವ ಯಾವುದೇ ಆವರಣವನ್ನು ಪ್ರವೇಶಿಸಬಹುದು.

(3) ಪ್ರತಿಯೊಂದು ನ್ಯಾಯಾಧಿಕರಣವು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908, (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ:–

(ಎ) ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣ ವಚನದ ಮೇಲೆ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳು ಮತ್ತು ಭೌತಿಕ ಪದಾರ್ಥಗಳನ್ನು ಹಾಜರುಪಡಿಸಲು ಒತ್ತಾಯಿಸುವುದು;

(ಸಿ) ಸಾಕ್ಷಿದಾರರ ಪರೀಕ್ಷೆಗಾಗಿ ಕಮಿಷನ್ನುಗಳನ್ನು ಹೊರಡಿಸುವುದು; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ವಿಷಯಗಳಿಗೆ ಸಂಬಂಧಿಸಿದಂತೆ–

–ಮತ್ತು ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ವಿಚಾರಣೆ ಅಥವಾ ತನಿಖೆಯು ಭಾರತ ದಂಡ ಸಂಹಿತೆ (1860ರ 45)ಯ 193 ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯಾಗಿರುವುದಾಗಿ ಭಾವಿಸತಕ್ಕುದು ಮತ್ತು ಆ ನ್ಯಾಯಾಧಿಕರಣವು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣ ಮತ್ತು ಅಧ್ಯಾಯ XXVIರ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವಾಗಿರುವುದಾಗಿ ಭಾವಿಸತಕ್ಕುದು.

(4) ಸಂಧಾನಾಧಿಕಾರಿಯು, ಆ ವಿವಾದಕ್ಕೆ ಸಂಬಂಧಪಟ್ಟಿರುವುದಾಗಿ ಅಥವಾ ಯಾವುದೇ ಐತೀರ್ಪಿನ ಕಾರ್ಯಗತಗೊಳಿಸುವಿಕೆಯನ್ನು ಸರಿನೋಡುವ ಅಥವಾ ಈ ಅಧ್ಯಾಯದ ಮೇರೆಗೆ ಅವನಿಗೆ ವಿಧಿಸಿದ ಯಾವುದೇ ಇತರ ಕರ್ತವ್ಯವನ್ನು ಈಡೇರಿಸುವ ಉದ್ದೇಶಕ್ಕಾಗಿ ಯಾವ ದಸ್ತಾವೇಜು ಅವಶ್ಯವಾಗಿರುವುದಾಗಿ ಅವನು ಪರ್ಯಾಲೋಚಿಸುವನೋ, ಆ ಯಾವುದೇ ದಸ್ತಾವೇಜನ್ನು ತರಿಸಿಕೊಳ್ಳಬಹುದು ಮತ್ತು ಅದನ್ನು ಪರಿಶೀಲಿಸಬಹುದು ಮತ್ತು ಹಿಂದೆ ಹೇಳಿದ ಉದ್ದೇಶಗಳಿಗಾಗಿ, ಆ ಸಂಧಾನಾಧಿಕಾರಿಯು ದಸ್ತಾವೇಜುಗಳನ್ನು ಹಾಜರುಪಡಿಸುವುದನ್ನು ಒತ್ತಾಯಿಸುವುದಕ್ಕೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತಗೊಂಡಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು.

(5) ನ್ಯಾಯಾಧಿಕರಣವು, ಅದು ಸೂಕ್ತವೆಂದು ಯೋಚಿಸಿದರೆ ಪರ್ಯಾಲೋಚನೆಯಲ್ಲಿರುವ ವಿಷಯದ ಬಗ್ಗೆ ವಿಶೇಷ ಜ್ಞಾನವನ್ನು ಹೊಂದಿರುವ ಒಬ್ಬ ಅಥವಾ ಇನ್ನೂ ಹೆಚ್ಚಿನ ವ್ಯಕ್ತಿಗಳನ್ನು ತನ್ನ ಮುಂದಿರುವ ವ್ಯವಹರಣೆಯಲ್ಲಿ ತನಗೆ ಸಲಹೆಯನ್ನು ಕೊಡಲು ಅಸೆಸರ್ ಅಥವಾ ಅಸೆಸರುಗಳೆಂದು ಅದು ನೇಮಕ ಮಾಡಬಹುದು.

(6) ನ್ಯಾಯಾಧಿಕರಣವು, ತನ್ನ ಮುಂದಿರುವ ಯಾವುದೇ ವ್ಯವಹರಣೆಯ ಯಾವನೇ ಪಕ್ಷಕಾರನಿಗೆ, ಯಾವುದೇ ಆದೇಶದ ತಡೆ, ಅಥವಾ 3ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಒಪ್ಪಂದದ ಮೇರೆಗೆ ಸಂದಾಯ ಮಾಡಬೇಕಾದ ಮಜೂರಿಗಳ ಅಥವಾ ಇತರ ಮೊಬಲಗುಗಳ ಬಗ್ಗೆ ಯಾವುದೇ ನಿರ್ಬಂಧಕಾಜ್ಞೆ ಅಥವಾ ನಿರ್ದೇಶನ – ಇವುಗಳನ್ನು ಕೊಡುವುದನ್ನೂ ಒಳಗೊಂಡು ಪ್ರಕರಣದ ಸಂದರ್ಭಗಳಲ್ಲಿ ಅದು ನ್ಯಾಯಯುತ ಮತ್ತು ಸರಿಯೆಂದು ಭಾವಿಸುವಂತೆ, ಕರಾರನ್ನು ಏಕ ಪಕ್ಷೀಯವಾಗಿ ಕೊನೆಗೊಳಿಸುವುದನ್ನು, ಕೆಲಸಗಾರನ ವಜಾ ಮಾಡಿರುವುದನ್ನು ರದ್ದುಗೊಳಿಸುವ ಅಥವಾ ಕೆಲಸಗಾರನನ್ನು ಪೂರ್ವ ಪದವಿಯಲ್ಲಿರಿಸುವಂಥ ಮಧ್ಯಕಾಲೀನ ಅಥವಾ ಇತರ ಪರಿಹಾರಗಳನ್ನು (ಯಾವುದೇ ಷರತ್ತುಗಳಿಗೆ ಒಳಪಟ್ಟಿರಲಿ ಅಥವಾ ಇಲ್ಲದಿರಲಿ) ಕೊಡಬಹುದು:

ಪರಂತು, ವ್ಯವಹರಣೆಯ ಎಲ್ಲಾ ಪಕ್ಷಕಾರರಿಗೆ ಅಂಥ ಮಧ್ಯಕಾಲೀನ ಪರಿಹಾರಕ್ಕಾಗಿನ ಅರ್ಜಿಯ ಬಗ್ಗೆ ನೋಟೀಸನ್ನು ಜಾರಿಗೊಳಿಸಲಾಗಿದ್ದ ಮತ್ತು ಅವರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟಿದ್ದ ಹೊರತು ನ್ಯಾಯಾಧಿಕರಣವು ಯಾವುದೇ ಅಂಥ ಮಧ್ಯಕಾಲೀನ ಪರಿಹಾರವನ್ನು ಕೊಡತಕ್ಕುದಲ್ಲ:

ಮತ್ತೂ ಪರಂತು, ಆ ನ್ಯಾಯಾಧಿಕರಣವು, ಕೋರಲಾದ ಮಧ್ಯಕಾಲೀನ ಪರಿಹಾರದ ಸ್ವರೂಪ ಮತ್ತು ಆ ಪ್ರಕರಣದ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಹಿಂದೆ ಹೇಳಿದ ಪರಂತುಕದಲ್ಲಿ ಉಲ್ಲೇಖಿಸಿರುವ ನೋಟೀಸನ್ನು, ವ್ಯವಹರಣೆಯ ಪಕ್ಷಕಾರರಿಗೆ ಜಾರಿಗೊಳಿಸುವುದಕ್ಕೆ ಮುಂಚೆ ಆ ಪ್ರಕರಣದ ಸಂದರ್ಭಗಳಲ್ಲಿ, ಅದು ನ್ಯಾಯಯುತ ಮತ್ತು ಸರಿಯೆಂದು ಭಾವಿಸುವಂಥ ಮಧ್ಯಕಾಲೀನ ಪರಿಹಾರವನ್ನು ಕೊಡುವ ಸಮುಚಿತ ಆದೇಶಗಳನ್ನು ಮಾಡಬಹುದು:

ಅದೂ ಅಲ್ಲದೆ, ಆ ನ್ಯಾಯಾಧಿಕರಣವು, ನಿಕಟ ಪೂರ್ವದ ಪರಂತುಕದ ಮೇರೆಗೆ ಯಾವುದೇ ಆದೇಶವನ್ನು ಮಾಡುವಲ್ಲಿ, ಅದು ಮೊದಲನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಅಗತ್ಯತೆಗಳನ್ನು ಪಾಲಿಸುವುದಕ್ಕೆ ಮುಂಚೆ, ಆ ಆದೇಶವನ್ನು ಮಾಡುವುದಕ್ಕಾಗಿನ ಕಾರಣಗಳನ್ನು ದಾಖಲು ಮಾಡತಕ್ಕುದು.

(7) ಈ ಬಗ್ಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು, ನ್ಯಾಯಾಧಿಕರಣದ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ ಹಾನಿ ಪರಿಹಾರಗಳನ್ನು ಮತ್ತು ಅದರ ಮತ್ತು ಅದಕ್ಕೆ ಪ್ರಾಸಂಗಿಕವಾದ ಖರ್ಚುಗಳನ್ನು ಹೂಡುವುದು ಆ ನ್ಯಾಯಾಧಿಕರಣದ ವಿವೇಚನಾನುಸಾರವಾಗಿರತಕ್ಕುದು ಮತ್ತು ಆ ನ್ಯಾಯಾಧಿಕರಣವು ಅಂಥ ಹಾನಿ ಪರಿಹಾರಗಳು ಅಥವಾ ಖರ್ಚುಗಳನ್ನು ಯಾರು ಮತ್ತು ಯಾರಿಗೆ ಹಾಗೂ ಎಷ್ಟರಮಟ್ಟಿಗೆ ಮತ್ತು ಯಾವುದಾದರೂ ಷರತ್ತುಗಳು ಇದ್ದರೆ, ಅವುಗಳಿಗೆ ಒಳಪಟ್ಟು ಸಂದಾಯ ಮಾಡಬೇಕಾಗಿದೆಯೋ ಅದನ್ನು ನಿರ್ಧರಿಸಲು ಮತ್ತು ಹಿಂದೆ ಹೇಳಿದ ಉದ್ದೇಶಗಳಿಗಾಗಿ ಎಲ್ಲಾ ಅವಶ್ಯ ನಿರ್ದೇಶನಗಳನ್ನು ಕೊಡಲು ಪೂರ್ಣ ಅಧಿಕಾರವನ್ನು ಹೊಂದಿರತಕ್ಕುದು ಮತ್ತು ಅಂಥ ಹಾನಿ ಪರಿಹಾರಗಳು ಅಥವಾ ವೆಚ್ಚಗಳನ್ನು, ಅವುಗಳಿಗೆ ಹಕ್ಕುಳ್ಳವನಾದ ವ್ಯಕ್ತಿಯು ಕೇಂದ್ರ ಸರ್ಕಾರಕ್ಕೆ ಮಾಡಿಕೊಂಡ ಅರ್ಜಿಯ ಮೇಲೆ ಭೂಕಂದಾಯದ ಬಾಕಿಯಂತೆ ಅದೇ ರೀತಿಯಲ್ಲಿ ಆ ಸರ್ಕಾರವು ವಸೂಲು ಮಾಡಬೇಕೆಂದು ನಿರ್ದೇಶಿಸಬಹುದು.

**13. ನ್ಯಾಯಾಧಿಕರಣಗಳ ಕರ್ತವ್ಯಗಳು.–** ನ್ಯಾಯ ನಿರ್ಣಯಕ್ಕಾಗಿ ವಿವಾದವನ್ನು ನ್ಯಾಯಾಧಿಕರಣಕ್ಕೆ ಒಪ್ಪಿಸಿರುವಲ್ಲಿ, ನ್ಯಾಯಾಧಿಕರಣವು ವ್ಯವಹರಣೆಗಳನ್ನು ತ್ವರಿತವಾಗಿ ನಡೆಸತಕ್ಕುದು; ಮತ್ತು ಅದರ ಐತೀರ್ಪನ್ನು ಕೇಂದ್ರ ಸರ್ಕಾರಕ್ಕೆ, ಸಾಮಾನ್ಯವಾಗಿ ಅಂಥ ಕೈಗಾರಿಕಾ ವಿವಾದವನ್ನು ಅದಕ್ಕೆ ಒಪ್ಪಿಸಿರುವಂಥ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ ಒಪ್ಪಿಸತಕ್ಕುದು:

ಪರಂತು, ಈ ಪ್ರಕರಣದ ಮೇರೆಗೆ ಮೂರು ತಿಂಗಳುಗಳ ಅವಧಿಯನ್ನು ಲೆಕ್ಕ ಹಾಕುವಲ್ಲಿ ಯಾವ ಅವಧಿಯವರೆಗೆ ಆ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳನ್ನು ಯಾವುದೇ ನಿರ್ಬಂಧಕಾಜ್ಞೆ ಅಥವಾ ಆದೇಶದಿಂದ ತಡೆಹಿಡಿದಿಡಲಾಗಿದ್ದಿತೋ ಆ ಅವಧಿಯನ್ನು ಹೊರತುಪಡಿಸತಕ್ಕುದು.

**14. ನ್ಯಾಯಾಧಿಕರಣಗಳ ಐತೀರ್ಪುಗಳ ಪ್ರಕಟಣೆ.–** (1) ಕೇಂದ್ರ ಸರ್ಕಾರವು, ನ್ಯಾಯಾಧಿಕರಣದ ಪ್ರತಿಯೊಂದು ಐತೀರ್ಪನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯ ಒಳಗೆ ಅದನ್ನು ಸರ್ಕಾರವು ಸೂಕ್ತವೆಂದು ಯೋಚಿಸುವಂಥ ರೀತಿಯಲ್ಲಿ ಪ್ರಕಟಿಸತಕ್ಕುದು.

(2) 15ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಆ ಐತೀರ್ಪು ಅಂತಿಮವಾಗಿರತಕ್ಕುದು ಮತ್ತು ವಿವಾದದ ಎಲ್ಲಾ ಪಕ್ಷಕಾರರು ಅದಕ್ಕೆ ಬದ್ಧರಾಗಿರತಕ್ಕುದು ಮತ್ತು ಅದನ್ನು ಯಾವುದೇ ರೀತಿಯಲ್ಲಿ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

(3) ನ್ಯಾಯಾಧಿಕರಣದ ಐತೀರ್ಪನ್ನು ಅದು ಸಿವಿಲ್ ನ್ಯಾಯಾಲಯದ ಡಿಕ್ರಿಯಾಗಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಅಮಲ್ಜಾರಿಗೊಳಿಸತಕ್ಕುದು.

**15. ಪುನರೀಕ್ಷಣೆ.**- (1) ಉಚ್ಚ ನ್ಯಾಯಾಲಯವು, ನ್ಯಾಯಾಧಿಕರಣದ ಐತೀರ್ಪಿನಿಂದ ಬಾಧಿತನಾದ ಯಾವನೇ ವ್ಯಕ್ತಿಯು ಮಾಡಿಕೊಂಡ ಅರ್ಜಿಯ ಮೇಲೆ ಅಂಥ ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಯ ಕ್ರಮಬದ್ಧತೆ ಅಥವಾ ಅದರಲ್ಲಿ ಮಾಡಿದ ಯಾವುದೇ ಐತೀರ್ಪಿನ ಸರಿತನ, ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಅದು ಮನದಟ್ಟು ಮಾಡಿಕೊಳ್ಳಲು ಆ ನ್ಯಾಯಾಧಿಕರಣದ ದಾಖಲೆಯನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಯಾವುದೇ ಪ್ರಕರಣದಲ್ಲಿ, ಉಚ್ಚ ನ್ಯಾಯಾಲಯಕ್ಕೆ ಯಾವುದೇ ಅಂಥ ಐತೀರ್ಪನ್ನು ಮಾರ್ಪಾಟು ಮಾಡಬೇಕೆಂದು, ರದ್ದುಗೊಳಿಸಬೇಕೆಂದು ಅಥವಾ ವಿಪರ್ಯಯಗೊಳಿಸಬೇಕೆಂದು ಕಂಡುಬಂದರೆ, ಅದು, ತದನುಸಾರವಾಗಿ ಅಂಥ ಆದೇಶಗಳನ್ನು ಮಾಡಬಹುದು:

ಪರಂತು, ಆ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವಲ್ಲಿ ಅಂಥ ಅರ್ಜಿಯನ್ನು ಉಚ್ಚ ನ್ಯಾಯಲಯದ ಇಬ್ಬರಿಗಿಂತ ಕಡಿಮೆ ಇಲ್ಲದ ನ್ಯಾಯಾಧೀಶರು ಸುನಾವಣೆ ಮಾಡತಕ್ಕುದು ಮತ್ತು ವಿಲೆ ಮಾಡತಕ್ಕುದು:

ಮತ್ತೂ ಪರಂತು, ಆ ನ್ಯಾಯಾಧಿಕರಣದ ಐತೀರ್ಪು ಯಾವುದೇ ಫಿಲ್ಮಿನ ನಿರ್ಮಾಪಕನು ಅಥವಾ ಸಂದರ್ಭಾನುಸಾರ ಕಂಟ್ರಾಕ್ಟರು ಅಥವಾ ಇತರ ವ್ಯಕ್ತಿಯು ಸಿನಿಮಾ ಕೆಲಸಗಾರನಿಗೆ ನಷ್ಟ ಪರಿಹಾರದ ರೂಪದಲ್ಲಿಯೇ ಆಗಲಿ ಅಥವಾ ಹಾನಿ ಪರಿಹಾರದ ರೂಪದಲ್ಲಿಯೇ ಆಗಲಿ ಯಾವುದೇ ಮೊಬಲಗನ್ನು ಸಂದಾಯ ಮಾಡುವುದಕ್ಕಾಗಿ ವ್ಯವಸ್ಥೆ ಮಾಡಿರುವಲ್ಲಿ ನಿರ್ಮಾಪಕ, ಕಂಟ್ರಾಕ್ಟರು ಅಥವಾ ಇತರ ವ್ಯಕ್ತಿಯು ಮಾಡಿಕೊಂಡಂಥ ಯಾವುದೇ ಅರ್ಜಿಯನ್ನು ಆ ಅರ್ಜಿದಾರನು ಸಂದಾಯ ಮಾಡಬೇಕೆಂದು ಆದೇಶಿಸಿರುವ ಮೊಬಲಗನ್ನು ಉಚ್ಚ ನ್ಯಾಯಾಲಯದಲ್ಲಿ ಅಥವಾ ನಿಯಮಿಸಬಹುದಾದಂಥ ಇತರ ಪ್ರಾಧಿಕಾರದಲ್ಲಿ ಇಟ್ಟ ಹೊರತು, ಉಚ್ಚ ನ್ಯಾಯಾಲಯವು ಪುರಸ್ಕರಿಸತಕ್ಕುದಲ್ಲ:

ಅದೂ ಅಲ್ಲದೆ, ಸಂದಾಯ ಮಾಡಬೇಕೆಂದು ಆದೇಶಿಸಿರುವ ಯಾವುದೇ ಮೊಬಲಗನ್ನು ಇಡುವುದು ಅರ್ಜಿದಾರನಿಗೆ ಅನುಚಿತ ಕಷ್ಟವನ್ನು ಉಂಟುಮಾಡುವುದೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಡುವಲ್ಲಿ, ಆ ಉಚ್ಚನ್ಯಾಯಾಲಯವು, ಸಂಬಂಧಪಟ್ಟ ಸಿನಿಮಾ ಕೆಲಸಗಾರನ ಹಿತಾಸಕ್ತಿಗಳನ್ನು ರಕ್ಷಿಸುವ ಹಾಗೆ ಅದು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಹಾಗೆ ಇಡುವುದರಿಂದ ವಿನಾಯಿತಿ ಕೊಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಮಾಡಿಕೊಳ್ಳಬೇಕಾದ ಪ್ರತಿಯೊಂದು ಅರ್ಜಿಯನ್ನು, ನ್ಯಾಯಾಧಿಕರಣವು ಆ ಐತೀರ್ಪನ್ನು ಕೊಟ್ಟಿದ್ದಂಥ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ ಸಲ್ಲಿಸತಕ್ಕುದು:

ಪರಂತು, ಆ ಉಚ್ಚನ್ಯಾಯಾಲಯವು, ಅದರ ವಿವೇಚನಾನುಸಾರ ಆ ಅರ್ಜಿದಾರನಿಗೆ ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಆ ಅರ್ಜಿಯನ್ನು ಸಲ್ಲಿಸದೇ ಇರುವುದಕ್ಕಾಗಿ, ಸಾಕಷ್ಟು ಕಾರಣವಿದ್ದಿತು ಎಂದು ಅದಕ್ಕೆ ಮನದಟ್ಟಾದರೆ, ಯಾವುದೇ ಅಂಥ ಅರ್ಜಿಯನ್ನು ದಾಖಲು ಮಾಡುವುದಕ್ಕಾಗಿ ಒಂದು ತಿಂಗಳನ್ನು ಮೀರಿದ ಇನ್ನೂ ಹೆಚ್ಚಿನ ಕಾಲವನ್ನು ಕೊಡಬಹುದು.

(3) ಈ ಪ್ರಕರಣದಲ್ಲಿ 'ಉಚ್ಚ ನ್ಯಾಯಾಲಯ' ಎಂದರೆ ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಆ ನ್ಯಾಯಾಧಿಕರಣದ ಕೇಂದ್ರ ಕಾರ್ಯಸ್ಥಾನವು ಇರುವುದೋ ಆ ಉಚ್ಚ ನ್ಯಾಯಾಲಯ.

**16. ಸಿನಿಮಾ ಕೆಲಸಗಾರರಿಗೆ 1952ರ ಅಧಿನಿಯಮ 19ರ ಅನ್ವಯ.**- ತತ್ಕಾಲದಲ್ಲಿ ಜಾರಿಯಲ್ಲಿರುವಂತೆ ನಿಯೋಜಿತರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 – ಇದು ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ನಿರ್ಮಾಪಕರೊಂದಿಗೆ ಮೂರು ಫೀಚರ್ ಫಿಲ್ಮುಗಳಿಗಿಂತ ಕಡಿಮೆ ಇಲ್ಲದಂತೆ ಕೆಲಸ ಮಾಡಿರುವ ಪ್ರತಿಯೊಬ್ಬ ಸಿನಿಮಾ ಕೆಲಸಗಾರನಿಗೆ, ಅಂಥ ಸಿನಿಮಾ ಕೆಲಸಗಾರನು ಆ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ ಬರುವ ನಿಯೋಜಿತನಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

**17. ದಂಡಗಳು.**- (1) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂಥ ಆದರೆ ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ಆ ನ್ಯಾಯಾಲಯವು ಆ ತೀರ್ಪಿನಲ್ಲಿ ನಮೂದು ಮಾಡಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಪರಾಧಿಯೆಂದು ನಿರ್ಣೀತನಾದ ಯಾವನೇ ವ್ಯಕ್ತಿಯು ಪುನಃ ಅದೇ ಉಪಬಂಧದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾದಲ್ಲಿ ಅವನು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂಥ ಆದರೆ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ನ್ಯಾಯಾಲಯವು ಆ ತೀರ್ಪಿನಲ್ಲಿ ನಮೂದಿಸಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**18. ಕಂಪನಿಗಳಿಂದ ಅಪರಾಧಗಳು.**- (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಆ ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿ ಮತ್ತು ಆ ಕಂಪನಿಯೂ ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸತಕ್ಕುದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ದಂಡಿತನಾಗತಕ್ಕುದು:

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಯಾವನೇ ಅಂಥ ವ್ಯಕ್ತಿಯು, ಆ ಅಪರಾಧವು ತನಗೆ ಗೊತ್ತಿಲ್ಲದೆ ಮಾಡಲಾಗಿದೆಯೆಂದು ಅಥವಾ ಅಂಥ ಅಪರಾಧ ಮಾಡುವುದನ್ನು ತಡೆಗಟ್ಟಲು ತಾನು ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅವರ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಹೇಳಬಹುದಾಗಿದೆಯೆಂದು ರುಜುವಾತುಪಡಿಸಿರುವಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಆ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವರು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ದಂಡಿತರಾಗತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

**19. ಅಪರಾಧಗಳ ಸಂಜ್ಞೇಯತೆ.-** ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಸಂಜ್ಞೇಯತೆಯನ್ನು, ಕೇಂದ್ರ ಸರ್ಕಾರ ಅಥವಾ ಈ ಬಗ್ಗೆ ಅದು ಶಕ್ತಗೊಳಿಸಿದ ಅಧಿಕಾರಿಯು ಬರಹದಲ್ಲಿ ಮಾಡಿಕೊಂಡ ದೂರು ಅಥವಾ ಅನುಮತಿಯೊಂದಿಗೆ ಅಲ್ಲದೆ ತೆಗೆದುಕೊಳ್ಳತಕ್ಕುದಲ್ಲ ಮತ್ತು ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮೊದಲ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಕೆಳಗಿನ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕುದಲ್ಲ.

**20. ಹೆಚ್ಚಿಸಲಾದ ದಂಡಗಳನ್ನು ವಿಧಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.-** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 29ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವನೇ ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಯಾವನೇ ಮೊದಲನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನು, ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ಕೊಡುವುದು ಅವನಿಗೆ ಕಾನೂನು ಸಮ್ಮತವಾಗಿರತಕ್ಕುದು.

**21. ಈ ಅಧ್ಯಾಯಕ್ಕೆ ಅಸಂಗತವಾಗಿರುವ ಕಾನೂನುಗಳು ಮತ್ತು ಒಪ್ಪಂದಗಳ ಪರಿಣಾಮ.-** ಈ ಅಧ್ಯಾಯದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದ ಅಥವಾ ಸೇವಾ ಕರಾರಿನ ನಿಬಂಧನೆಗಳಲ್ಲಿ ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ, ಪರಿಣಾಮವನ್ನು ಹೊಂದಿರತಕ್ಕುದು.

**22. ಈ ಅಧ್ಯಾಯದ ಮೇರೆಗೆ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ.-** (1) ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿರುವಂಥ ಯಾವುದೇ ಕಾರ್ಯಕ್ಕಾಗಿ ಯಾವುದೇ ಸಕ್ಷಮ ಪ್ರಾಧಿಕಾರ, ಸಂಧಾನಾಧಿಕಾರಿ ಅಥವಾ ಕೇಂದ್ರ ಸರ್ಕಾರದ ಯಾವನೇ ಇತರ ನೌಕರ ಅಥವಾ ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕುದಲ್ಲ.

(2) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಹೊರಡಿಸಿದ ಅಧಿಸೂಚನೆ ಅಥವಾ ಮಾಡಿದ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿರುವಂಥ ಯಾವುದೇ ಕಾರ್ಯದ ಮೂಲಕ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಕೇಂದ್ರ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕುದಲ್ಲ.

**22ಎ. ಅಧಿಕಾರಗಳ ಪ್ರತ್ಯಾಯೋಜನೆ.-** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ (ಈ ಪ್ರಕರಣದ ಮತ್ತು 23ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಹೊರತುಪಡಿಸಿ) ಈ ಅಧಿನಿಯದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳ ಸಂಬಂಧದಲ್ಲಿ ಮತ್ತು ಷರತ್ತುಗಳು ಯಾವುವಾದರೂ ಇದ್ದರೆ ಅಂಥ ಷರತ್ತುಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯ ಸರ್ಕಾರಕ್ಕೆ ಅಧೀನನಾದಂಥ ಅಧಿಕಾರಿ ಅಥವಾ ಪ್ರಾಧಿಕಾರವು ಸಹ ಚಲಾಯಿಸತಕ್ಕುದೆಂದು ನಿರ್ದೇಶಿಸಬಹುದು.

**23. ನಿಯಮ ರಚನಾಧಿಕಾರ.-** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ ಮೇರೆಗೆ ಸಿನಿಮಾ ಕೆಲಸಗಾರನೊಂದಿಗೆ ನಿರ್ಮಾಪಕನು ಮಾಡಿಕೊಳ್ಳಬಹುದಾದಂಥ ಒಪ್ಪಂದದ ನಮೂನೆ ಮತ್ತು ನಿಯೋಜನೆಯ ಇತರ ಷರತ್ತುಗಳು;

(ಬಿ) 5ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂಧಾನಾಧಿಕಾರಿಯು ನಡೆಸಬಹುದಾದಂಥ ವ್ಯವಹರಣೆಗಳ ರೀತಿ;

(ಸಿ) 12ನೇ ಪ್ರಕರಣದ ಮೇರೆಗೆ ಸಂಧಾನಾಧಿಕಾರಿಯು ಅಥವಾ ನ್ಯಾಯಾಧಿಕರಣವು ಅನುಸರಿಸಬೇಕಾದ ಪ್ರಕ್ರಿಯೆ;

(ಡಿ) 12ನೇ ಪ್ರಕರಣದ (3)ನೇ ಉಪಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಿರುವ ವಿಷಯಗಳು;

(ಇ) 12ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ನ್ಯಾಯಾಧಿಕರಣವು ಕೊಡಬಹುದಾದ ಹಾನಿಪರಿಹಾರಗಳು ಅಥವಾ ಖರ್ಚುಗಳು;

(ಎಫ್) ನಿಯಮಿಸಬೇಕೆಂದು ಅಥವಾ ನಿಯಮಿಸಬಹುದೆಂದು ಅಗತ್ಯಪಡಿಸಿರುವ ಇತರ ವಿಷಯಗಳು.

(3) ಈ ಅಧ್ಯಾಯದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ಮಂಡಿಸತಕ್ಕದು; ಮತ್ತು ಹಿಂದೆ ಹೇಳಿದ ಆ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ, ಅಥವಾ ಎರಡೂ ಸದನಗಳು ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

## ಅಧ್ಯಾಯ-III

### ಸಿನಿಮಾ ಥಿಯೇಟರ್ ಕೆಲಸಗಾರರ ನಿಯೋಜನೆಯ ವಿನಿಯಮನ

**24. 1952ರ ಅಧಿನಿಯಮ 19ರ ಅನ್ವಯ.–** ತತ್ಕಾಲದಲ್ಲಿ ಜಾರಿಯಲ್ಲಿರುವಂತೆ ನಿಯೋಜಿತರ ಭವಿಷ್ಯ ನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952ರ ಉಪಬಂಧಗಳು ಯಾವುದೇ ದಿವಸದಂದು ಐವರು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸಗಾರರನ್ನು ನಿಯೋಜಿಸಿಕೊಳ್ಳಲಾಗಿರುವ ಪ್ರತಿಯೊಂದು ಸಿನಿಮಾ ಥಿಯೇಟರಿಗೆ, ಅಂಥ ಸಿನಿಮಾ ಥಿಯೇಟರು ಸದರಿ ಅಧಿನಿಯಮದ 1ನೇ ಪ್ರಕರಣದ 3ನೇ ಉಪಪ್ರಕರಣದ ಪರಂತುಕದ ಮೇರೆಗಿನ ಕೇಂದ್ರ ಸರ್ಕಾರದ ಅಧಿಸೂಚನೆಯ ಮೂಲಕ ಯಾವ ಕಾರ್ಯಸಂಸ್ಥೆಗೆ ಹಿಂದೆ ಹೇಳಿದ ಅಧಿನಿಯಮವನ್ನು ಅನ್ವಯಿಸಲಾಗಿತ್ತೋ ಆ ಕಾರ್ಯ ಸಂಸ್ಥೆಯು ಆಗಿದ್ದಿದ್ದರೆ ಹೇಗೋ ಹಾಗೆ ಮತ್ತು ಪ್ರತಿಯೊಬ್ಬ ಅಂಥ ಕೆಲಸಗಾರನು ಆ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ ನಿಯೋಜಿತನಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದು.

**25. 1972ರ ಅಧಿನಿಯಮ 39ರ ಅನ್ವಯ.–** ತತ್ಕಾಲದಲ್ಲಿ ಜಾರಿಯಲ್ಲಿರುವಂತೆ ಉಪದಾನ ಸಂದಾಯ ಅಧಿನಿಯಮ, 1972ರ ಉಪಬಂಧಗಳು, ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಬರುವ ನಿಯೋಜಿತರಿಗೆ ಅಥವಾ ಅವರಿಗೆ ಸಂಬಂಧಪಟ್ಟಂತೆ ಅವು ಅನ್ವಯವಾಗುವಂತೆ ಹಿಂದಿನ ಹನ್ನೆರಡು ತಿಂಗಳುಗಳ ಯಾವುದೇ ದಿವಸದಂದು ಯಾವ ಸಿನಿಮಾ ಥಿಯೇಟರಿನಲ್ಲಿ ಐವರು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸಗಾರರನ್ನು ನಿಯೋಜಿಸಿಕೊಳ್ಳಲಾಗಿದೆಯೋ ಅಥವಾ ನಿಯೋಜಿಸಿಕೊಳ್ಳಲಾಗಿತ್ತೋ ಆ ಸಿನಿಮಾ ಥಿಯೇಟರಿನಲ್ಲಿ ನಿಯೋಜಿಸಿಕೊಂಡಿರುವ ಪ್ರತಿಯೊಬ್ಬ ಕೆಲಸಗಾರನಿಗೆ ಅಥವಾ ಅವನಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದು.

* * *